**ಮೃತ ಗ್ರಾಹಕರ ಆಸ್ತಿಗಳನ್ನು ಕಾನೂನು ಸಮ್ಮತ ಜೀವಂತವಾರಸುದಾರರಿಗೆ/ ಕ್ಲೇಮುದಾರರಿಗೆ ಬಿಡುಗಡೆ ಮಾಡುವುದು**

ಡಿಬಿಒಡಿ. ಬಿಸಿ. ಸಂಖ್ಯೆ. 55/09-07-007/2001-02 ಜನವರಿ 01, 2002

ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ,
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಮೃತ ಗ್ರಾಹಕರ ಆಸ್ತಿಗಳನ್ನು ಕಾನೂನು ಸಮ್ಮತ ಜೀವಂತ ವಾರಸುದಾರರಿಗೆ/ ಕ್ಲೇಮುದಾರರಿಗೆ ಬಿಡುಗಡೆ ಮಾಡುವುದು**

ನಮ್ಮ ಸುತ್ತೋಲೆ ಡಿಬಿಒಡಿ ಬಿಸಿ ಸಂಖ್ಯೆ 148/09.07.007/1999-2000 ದಿನಾಂಕ ಮಾರ್ಚ್ 14, 2000 ಇದರ ಅನ್ವಯ ಮೃತ ಠೇವಣಿದಾರರ ಖಾತೆಯಲ್ಲಿರುವ ಹಣ 25,000/- ರೂಪಾಯಿಗಳನ್ನು ಮೀರದಿದ್ದಲ್ಲಿ ಕಾನೂನು ಸಮ್ಮತ ವಾರಸುದಾರರಿಂದ ಉತ್ತರಾಧಿಕಾರ ಪತ್ರಕ್ಕೆ ಒತ್ತಾಯಿಸಬಾರದೆಂದು ಬ್ಯಾಂಕುಗಳಿಗೆ ಸಲಹೆ ಸೂಚಿಸಲಾಗಿತ್ತು. ನಮ್ಮ ಸುತ್ತೋಲೆ ದಿನಾಂಕ ಡಿಸೆಂಬರ್ 06, 2006ದ ಡಿಬಿಒಡಿ.ಸಂಖ್ಯೆ.ಬಿಸಿ.56/09.07.07/2000-01 ರಲ್ಲಿ ಕೆಲವು ಸುರಕ್ಷತಾ ಕ್ರಮಗಳನ್ನು ಗೊತ್ತುಪಡಿಸಲಾಗಿತ್ತು. ಅವುಗಳ ಅನ್ವಯ ಬ್ಯಾಂಕುಗಳು,

? ವಿವಾದಗಳಿರುವ ಮತ್ತು ಬ್ಯಾಂಕುಗಳಿಗೆ ನಷ್ಟ ತುಂಬಿಕೊಡುವಲ್ಲಿ ಎಲ್ಲ ಕಾನೂನು ಸಮ್ಮತ ವಾರಸುದಾರರು ಒಟ್ಟಿಗೆ ಸೇರದಿರುವ ಅಥವಾ

? ಕ್ಲೇಮುದಾರ/ರು ಠೇವಣಿದಾರನ ಏಕೈಕ ಕಾನೂನು ಸಮ್ಮತ ವಾರಸುದಾರ/ರು ಆಗಿರುವುದರ ನೈಜತೆಯ ಬಗ್ಗೆ ಬ್ಯಾಂಕಿಗೆ ಯುಕ್ತ ಸಂಶಯವಿರುವ

ಪ್ರಕರಣಗಳಲ್ಲಿ ಮೃತ ಠೇವಣಿದಾರರ ಕಾನೂನು ಸಮ್ಮತ ವಾರಸುದಾರರಿಂದ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಕೇಳಬಹುದು.

2. ಬ್ಯಾಂಕುಗಳಲ್ಲಿ ಸುರಕ್ಷಿತ ಅಭಿರಕ್ಷೆಯಲ್ಲಿಟ್ಟಿರುವ ವಸ್ತುಗಳು, ಸಾಲಗಳಿಗೆ ಪ್ರತಿಯಾಗಿ ಹೊಂದಿರುವ ಭದ್ರತೆಗಳು ಇತ್ಯಾದಿ ಯಾವುದಾದರೂ ಇದ್ದರೆ ಅವುಗಳನ್ನು ಹೊಂದಾಣಿಕೆ ಮಾಡಿದ ನಂತರ, ಮುಂತಾದಂಥ ಮೃತ ಗ್ರಾಹಕರ ಇತರ ಆಸ್ತಿಗಳ ಸಂಬಂಧದಲ್ಲಿ ಕ್ಲೇಮುಗಳ ಇತ್ಯರ್ಥಕ್ಕೆ ಇದೇ ಮೂಲತತ್ವವನ್ನು ವಿಸ್ತರಿಸಬೇಕೆಂದು ಬ್ಯಾಂಕುಗಳು ನಮಗೆ ಮನವಿ ಮಾಡುತ್ತಿವೆ.

3. ನಾವು ಭಾರತೀಯ ಬ್ಯಾಂಕುಗಳ ಸಂಘದೊಂದಿಗೆ ಸಮಾಲೋಚಿಸಿ ಬ್ಯಾಂಕುಗಳ ಮನವಿಯನ್ನು ಪರಿಶೀಲಿಸಿದ್ದೇವೆ ಮತ್ತು ದಿನಾಂಕ ಡಿಸೆಂಬರ್ 6, 2000 ದ ನಮ್ಮ ಸುತ್ತೋಲೆಯಲ್ಲಿ ಸೂಚಿಸಲಾಗಿರುವ ಸುರಕ್ಷೆಗಳಿಗೆ ಒಳಪಟ್ಟು ಮೃತ ಗ್ರಾಹಕರ ಇತರ ಆಸ್ತಿಗಳ ಬಿಡುಗಡೆಗೆ ಕಾನೂನು ಪ್ರಾತಿನಿಧ್ಯವನ್ನು ಒತ್ತಾಯಿಸಬಾರದೆಂದು ಬ್ಯಾಂಕುಗಳಿಗೆ ಸಲಹೆ ಮಾಡುತ್ತೇವೆ.

4. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,
(ಕೆ. ಎನ್. ರೂಪಾನಿ)
ಉಪ ಪ್ರಧಾನ ವ್ಯವಸ್ಥಾಪಕ.